ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೧**

# ಕರ್ನಾಟಕ ವಿಧಾನಸಭೆ

**ಹದಿನೈದನೇ ವಿಧಾನಸಭೆ**

**ಎಂಟನೇ ಅಧಿವೇಶನ**

**ಸೋಮವಾರ, ದಿನಾಂಕ: ೦೭ನೇ ಡಿಸೆಂಬರ್, ೨೦೨೦**

---

## ಸಮೂಹ – 'ಅ - A'

೧. ಮಾನ್ಯ ಉಪ ಮುಖ್ಯಮಂತ್ರಿಗಳು (ಲೋಕೋಪಯೋಗಿ)

೨. ಮಾನ್ಯ ಕಂದಾಯ ಸಚಿವರು

೩. ಮಾನ್ಯ ವಸತಿ ಸಚಿವರು

೪. ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

೫. ಮಾನ್ಯ ಕೃಷಿ ಸಚಿವರು

---

## ಮಿನಿ ವಿಧಾನಸೌಧ ನಿರ್ಮಾಣ

**ಶ್ರೀ ದೊಡ್ಡನಗೌಡ ಜಿ. ಪಾಟೀಲ್ (ಹುನಗುಂದ) –**

೧ (೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹೊಸದಾಗಿ ತಾಲ್ಲೂಕು ಕೇಂದ್ರವಾಗಿರುವ ಇಳಕಲ್‌ನಲ್ಲಿ ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಅನುದಾನ ಮಂಜೂರು ಮಾಡಿ, ಕಾಮಗಾರಿ ಪ್ರಾರಂಭಿಸಲಾಗುವುದೇ ? (ಸಂಪೂರ್ಣ ವಿವರ ನೀಡುವುದು)

## ಹೊರವರ್ತುಲ ರಸ್ತೆ ನಿರ್ಮಾಣ

**ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್** (ಇಂಡಿ) –

೨ (೪೦) ಮಾನ್ಯ ಉಪ ಮುಖ್ಯಮಂತ್ರಿಗಳು (ಲೋಕೋಪಯೋಗಿ) ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೩ ವರ್ಷಗಳಿಂದ ಇಂಡಿ ಪಟ್ಟಣದ ಹೊರಭಾಗದಲ್ಲಿ ಹೊರವರ್ತುಲ (ರಿಂಗ್ ರಸ್ತೆ) ಬೈಪಾಸ್ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದಲ್ಲಿ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಅದರ ರೂಪುರೇಷೆಗಳೇನು ; (ವಿವರ ನೀಡುವುದು)

(ಇ) ಸದರಿ ಕಾಮಗಾರಿಗೆ ಇದುವರೆಗೂ ಅನುದಾನ ಮಂಜೂರು ಮಾಡದಿರಲು ಕಾರಣಗಳೇನು ;

(ಈ) ಪ್ರಸ್ತುತ ಸಾಲಿನಲ್ಲಿ ಸದರಿ ಕಾಮಗಾರಿಗೆ ಅನುದಾನ ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ ; ಹಾಗಿದ್ದಲ್ಲಿ, ಯಾವಾಗ ಮತ್ತು ಎಷ್ಟು ಅನುದಾನವನ್ನು ಮಂಜೂರು ಮಾಡಲಾಗುವುದು; (ವಿವರ ನೀಡುವುದು)

(ಉ) ಪಟ್ಟಣಗಳ/ನಗರದ ಹೊರಭಾಗದಲ್ಲಿ ಹೊರವರ್ತುಲ ರಸ್ತೆ ನಿರ್ಮಾಣಕ್ಕೆ ಮಂಜೂರಾತಿ ನೀಡಲು ಸರ್ಕಾರ ಅನುಸರಿಸುವ ಮಾನದಂಡಗಳೇನು ? (ವಿವರ ನೀಡುವುದು)

## ಕೃಷಿ ಯಂತ್ರೋಪಕರಣಗಳು

**ಶ್ರೀ ನಂಜೇಗೌಡ ಕೆ.ವೈ. (ಮಾಲೂರು) –**

೩ (೧೮೭) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೃಷಿ ಯಾಂತ್ರೀಕರಣ ಯೋಜನೆಯಡಿಯಲ್ಲಿ ಟ್ರ್ಯಾಕ್ಟರ್, ಟ್ರೇಲರ್ ಇನ್ನಿತರೆ ಯಂತ್ರೋಪಕರಣಗಳನ್ನು ವಿತರಿಸಲು ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು ; (ವಿವರ ನೀಡುವುದು)

(ಆ) ಮಾಲೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಯೋಜನೆಯಡಿಯಲ್ಲಿ ಸದರಿ ಯಂತ್ರೋಪಕರಣಗಳನ್ನು ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ; (ಕಳೆದ ಮೂರು ವರ್ಷಗಳ ವಿವರ ಒದಗಿಸುವುದು)

(ಇ) ಕೃಷಿ ಚಟುವಟಿಕೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಆಧುನಿಕ ಕ್ರಮಗಳೇನು ? (ವಿವರ ನೀಡುವುದು)

## ಹೌಸಿಂಗ್ ಫಾರ್ ಆಲ್ ಯೋಜನೆ

**ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) –**

೪ (೫೧) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಅರಸೀಕೆರೆ ನಗರದಲ್ಲಿ ಹೌಸಿಂಗ್ ಫಾರ್ ಆಲ್ (Housing for all) ಯೋಜನೆಯಡಿ ಆಶ್ರಯ ಮನೆ ನಿರ್ಮಾಣ ಕಾಮಗಾರಿ ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಾಮಗಾರಿ ಕುಂಠಿತವಾಗಲು ಕಾರಣಗಳೇನು ; ಯಾವ ಕಾಲಮಿತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ;

(ಆ) ಸದರಿ ಯೋಜನೆಯ ಒಟ್ಟು ಮೊತ್ತ ಎಷ್ಟು ; ಇದುವರೆವಿಗೂ ಬಿಡುಗಡೆಯಾದ ಅನುದಾನವೆಷ್ಟು ?

## ರಸ್ತೆ ಅಭಿವೃದ್ಧಿ

**ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್. (ದೇವನಹಳ್ಳಿ ) –**

೫ (೧೭) ಮಾನ್ಯ ಉಪ ಮುಖ್ಯಮಂತ್ರಿಗಳು (ಲೋಕೋಪಯೋಗಿ) ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ದೇವನಹಳ್ಳಿ ಹಾಗೂ ವಿಜಯಪುರ ಪಟ್ಟಣಗಳ ವ್ಯಾಪ್ತಿಯಲ್ಲಿ ರಸ್ತೆಗಳು ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಪ್ರದೇಶಗಳು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದ್ದು, ವಾಹನ ಸಂಚಾರ ಹೆಚ್ಚಾಗಿರುವುದರಿಂದ ಹದಗೆಟ್ಟಿರುವ ರಸ್ತೆಗಳ ದುರಸ್ತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ಎರಡು ಪಟ್ಟಣಗಳಲ್ಲಿ ೦೪ ಪಥದ ರಸ್ತೆ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ದಾಖಲೆ ರಹಿತ ಕಂದಾಯ ಗ್ರಾಮಗಳು

**ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ) –**

೬ (೨೫೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ದಾಖಲೆ ರಹಿತ ಕಂದಾಯ ಗ್ರಾಮಗಳೆಷ್ಟು ; (ವಿವರ ನೀಡುವುದು)

(ಆ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ ದಾಖಲೆ ರಹಿತ ಕಂದಾಯ ಗ್ರಾಮಗಳಲ್ಲಿನ ಜನವಸತಿ ಪ್ರದೇಶಗಳು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ದಾಖಲೆ ರಹಿತ ಕಂದಾಯ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಯೋಜನೆಗಳ ಅನುಷ್ಠಾನ

**ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ) –**

೭ (೨೮) ಮಾನ್ಯ ಉಪ ಮುಖ್ಯಮಂತ್ರಿಗಳು (ಲೋಕೋಪಯೋಗಿ) ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೩ ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಮಂಜೂರಾದ ಮತ್ತು ಅನುಷ್ಠಾನಗೊಳಿಸಲಾಗಿರುವ ಕಾಮಗಾರಿಗಳು ಯಾವುವು ; ಅವುಗಳಲ್ಲಿ ಅಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು ;

(ಆ) ಮೂಡಬಿದರೆ/ಮೂಲ್ಕಿ ಕ್ಷೇತ್ರ ವ್ಯಾಪ್ತಿಯಲ್ಲಿ ಇಲಾಖಾ ವತಿಯಿಂದ ಕೈಗೊಂಡ ನೂತನ ರಸ್ತೆಗಳು ಹಾಗೂ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳೆಷ್ಟು ; (ವಿವರ ನೀಡುವುದು)

(ಇ) ಮೂಡಬಿದರೆ ಕ್ಷೇತ್ರದ ವ್ಯಾಪ್ತಿಯಲ್ಲಿ ಹೆಚ್ಚಿನ ಇಲಾಖಾ ಕಾಮಗಾರಿಗಳನ್ನು ಸಕಾಲಿಕವಾಗಿ ರೂಪಿಸಿ ಜಾರಿಗೊಳಿಸಲು ಸರ್ಕಾರದ ಕ್ರಿಯಾ ಯೋಜನೆಗಳೇನು ?

## ಗ್ರಾಮ ಲೆಕ್ಕಾಧಿಕಾರಿಗಳು

**ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ) –**

೮ (೫೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಖಾಲಿಯಿರುವ ಗ್ರಾಮಲೆಕ್ಕಿಗರ ಹುದ್ದೆಗಳ ಸಂಖ್ಯೆ ಎಷ್ಟು ;

(ಆ) ಸದರಿ ಜಿಲ್ಲೆಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯೆಯೆಷ್ಟು ; (ವಿವರ ನೀಡುವುದು)

(ಇ) ಖಾಲಿಯಿರುವ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳನ್ನು ಸರ್ಕಾರವು ಭರ್ತಿ ಮಾಡದೇ ಒಬ್ಬ ಗ್ರಾಮ ಲೆಕ್ಕಾಧಿಕಾರಿಗೆ ಹಲವಾರು ಕಂದಾಯ ವೃತ್ತಗಳ ಪ್ರಭಾರ ನೀಡಿ ಕೆಲಸದ ಒತ್ತಡ ಹೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಉ) ನಿಯೋಜನೆ ಮೇರೆಗೆ ಅನ್ಯ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಲೆಕ್ಕಾಧಿಕಾರಿಗಳನ್ನು ಪುನಃ ಅವರ ಮೂಲ ಸ್ಥಳಕ್ಕೆ ಕಳುಹಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ವಿವರ ನೀಡುವುದು)

## ಹೊಸ ಕಾಮಗಾರಿಗಳು

**ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ) –**

೯ (೧೩) ಮಾನ್ಯ ಉಪ ಮುಖ್ಯಮಂತ್ರಿಗಳು (ಲೋಕೋಪಯೋಗಿ) ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ೨೦೨೦–೨೧ನೇ ಸಾಲಿನಲ್ಲಿ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (SHDP)ಯಿಂದ ಹೊಸದಾಗಿ ಎಷ್ಟು ಮೊತ್ತದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ ;

(ಆ) ಈ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಇರುವ ಅನುದಾನದ ಮೂಲಗಳು ಯಾವುವು ;

(ಇ) ಪಿರಿಯಾಪಟ್ಟಣ ಮತಕ್ಷೇತ್ರದಲ್ಲಿ ೨೦೨೦–೨೧ನೇ ಸಾಲಿನಲ್ಲಿ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (SHDP)ಯಿಂದ ಎಷ್ಟು ಮೊತ್ತದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ ? (ಕಾಮಗಾರಿಗಳ ವಿವರ ನೀಡುವುದು)

## ಮಂಜೂರಾದ ಹುದ್ದೆಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗ) –**

೧೦ (೧೮೩) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೊಪ್ಪಳ ಜಿಲ್ಲೆಯಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕರ, ಉಪನಿರ್ದೇಶಕರ ಹಾಗೂ ಸಹಾಯಕ ನಿರ್ದೇಶಕರ ಕಛೇರಿಗಳಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ; (ವೃಂದವಾರು ವಿವರ ನೀಡುವುದು)

(ಆ) ಸದರಿ ಹುದ್ದೆಗಳ ಪೈಕಿ ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು ; (ಹುದ್ದೆವಾರು ವಿವರ ನೀಡುವುದು)

(ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಸದರಿ ನೇಮಕಾತಿಗೆ ಅನುಸರಿಸಲಾದ ಮಾನದಂಡಗಳೇನು ? (ತಾಲ್ಲೂಕುವಾರು ವಿವರ ನೀಡುವುದು)

## ದೇವಸ್ಥಾನಗಳ ಜೀರ್ಣೋದ್ಧಾರ

**ಶ್ರೀ ಬೆಳ್ಳಿಪ್ರಕಾಶ್ (ಕಡೂರು) –**

೧೧ (೧೬೧) ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಡೂರು ವಿಧಾನಸಭಾ ಕ್ಷೇತ್ರದಲ್ಲಿ ಬರುವ ಮುಜರಾಯಿ ದೇವಸ್ಥಾನಗಳ ಸಂಖ್ಯೆ ಎಷ್ಟು ; ಪ್ರಸಕ್ತ ಸಾಲಿನಲ್ಲಿ ಈ ಕ್ಷೇತ್ರದ ದೇವಾಲಯಗಳ ಜೀರ್ಣೋದ್ಧಾರಕ್ಕೆ ಬಿಡುಗಡೆಯಾದ ಅನುದಾನವೆಷ್ಟು ;

(ಆ) ಬಿಡುಗಡೆ ಮಾಡಲಾದ ಅನುದಾನದಲ್ಲಿ ಖರ್ಚಾದ ಹಾಗೂ ಬಾಕಿ ಉಳಿದಿರುವ ಅನುದಾನವೆಷ್ಟು ; (ವಿವರ ನೀಡುವುದು)

(ಇ) ಜೀರ್ಣೋದ್ಧಾರ ಮಾಡಲು ಆಯ್ಕೆಯಾದ ದೇವಾಲಯಗಳು ಯಾವುವು ? (ವಿವರ ನೀಡುವುದು)

## ಸಾಫ್ಟ್‌ವೇರ್‌ನಲ್ಲಿನ ದೋಷದಿಂದಾಗಿ ಪಹಣಿಯಲ್ಲಿ ತಪ್ಪಾಗಿ ನಮೂದಾಗುತ್ತಿರುವುದು

**ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ) –**

೧೨ (೧೫೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೨ ವರ್ಷಗಳಿಂದಲೂ ಸಾಫ್ಟ್‌ವೇರ್ ದೋಷದಿಂದ ಪಹಣಿಯ ಬೆಳೆ ಕಾಲಂನಲ್ಲಿ "ಖುಷ್ಕಿ" ಎಂದು ಮಾತ್ರ ನಮೂದಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸಾಫ್ಟ್‌ವೇರ್ ಸಮಸ್ಯೆಯನ್ನು ಯಾವ ಕಾಲಮಿತಿಯೊಳಗೆ ಸರಿಪಡಿಸಲಾಗುತ್ತದೆ ;

(ಇ) ಶೃಂಗೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಪಹಣಿಯಲ್ಲಿನ ದೋಷದಿಂದಾಗಿ ಇದುವರೆವಿಗೂ ಎಷ್ಟು ರೈತರು ಬೆಳೆ ಸಾಲ, ಸಹಾಯ ಧನಗಳಿಂದ ವಂಚಿತರಾಗಿದ್ದಾರೆ ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಮೀನು ಉತ್ಪಾದನಾ ಕೇಂದ್ರ

**ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ) –**

೧೩ (೧೫೧) ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಳೆನರಸೀಪುರ ತಾಲ್ಲೂಕು ಶ್ರೀರಾಮದೇವರ ಕಟ್ಟೆಯಲ್ಲಿ ಸುಮಾರು ೪೦ ವರ್ಷಗಳ ಅವಧಿಯಿಂದ ಮೀನು ಉತ್ಪಾದನಾ ಕೇಂದ್ರವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ಮೀನು ಉತ್ಪಾದನಾ ಕೇಂದ್ರದಲ್ಲಿರುವ ಕೊಳಗಳು ಶಿಥಿಲಗೊಂಡಿದ್ದು, ಮೀನು ಉತ್ಪಾದನಾ ಕೆಲಸ ಕುಂಠಿತವಾಗಿರುವುದರಿಂದ ಮೀನುಗಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಸದರಿ ಕೇಂದ್ರದ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಯೋಜನೆಗಳೇನು ? (ಸಂಪೂರ್ಣ ವಿವರ ನೀಡುವುದು)

## ಪ್ರವಾಸಿ ಮಂದಿರ ಕಟ್ಟಡ ನವೀಕರಣ

**ಶ್ರೀ ಸಂಜೀವ ಮಠಂದೂರ್ (ಪುತ್ತೂರು) –**

೧೪ (೨೦೬) ಮಾನ್ಯ ಉಪ ಮುಖ್ಯಮಂತ್ರಿಗಳು (ಲೋಕೋಪಯೋಗಿ) ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪುತ್ತೂರು ತಾಲ್ಲೂಕಿನಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: ೭೫ರ ಪಕ್ಕದಲ್ಲಿ ಬರುವ ಉಪ್ಪಿನಂಗಡಿ ಪಟ್ಟಣದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ಹಳೆಯ ಪ್ರವಾಸಿ ಮಂದಿರವನ್ನು ನವೀಕರಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿಲ್ಲದಿದ್ದಲ್ಲಿ, ಹೊಸದಾಗಿ ಪ್ರವಾಸಿ ಮಂದಿರವನ್ನು ನಿರ್ಮಿಸುವ ಯೋಜನೆಯು ಸರ್ಕಾರದ ಮುಂದಿದೆಯೇ ?

# ಆರಾಧನಾ ಯೋಜನೆ

**ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು) –**

೧೫ (೨೧೯) ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹುಣಸೂರು ತಾಲ್ಲೂಕಿಗೆ ಮುಜರಾಯಿ ಇಲಾಖೆಯಿಂದ ಆರಾಧನಾ ಯೋಜನೆಯಡಿ ಮಂಜೂರಾಗಿರುವ ಅನುದಾನವೆಷ್ಟು ; (ಕಳೆದ ೩ ವರ್ಷಗಳ ವಿವರ ನೀಡುವುದು)

(ಆ) ಗ್ರಾಮಸ್ಥರ ಬೇಡಿಕೆಗೆ ಅನುಗುಣವಾಗಿ ಬಿಡುಗಡೆ ಮಾಡಲಾದ ಅನುದಾನದ ಮೊತ್ತ ಎಷ್ಟು ? (ಗ್ರಾಮವಾರು, ವರ್ಷವಾರು ವಿವರ ನೀಡುವುದು)

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನಸಭೆ

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು ಕಾ.ಸೂ. 475 ಪ್ರತಿಗಳು 1000 – ಷಿ2

**List of Questions for Oral Answers**

**Total No. of Questions - 15**

# LIST - 01

# KARNATAKA LEGISLATIVE ASSEMBLY

## FIFTEENTH ASSEMBLY

## EIGHTH SESSION

## Monday, 7th December, 2020

---

## GROUP - A

1. Hon'ble Deputy Chief Minister (Public Works)
2. Minister for Revenue
3. Minister for Housing
4. Minister for Fisheries, Ports and Inland Water Transport and Revenue (Endowments)
5. Minister for Agriculture

---

### CONSTRUCTION OF MINI VIDHANA SOUDHA

**SRI DODANAGOUDA G. PATIL (HUNGUND) -**

1.(02) Will the Minister for Revenue be pleased to state:-

a) whether there is a proposal before the Government to construct mini vidhana soudha building in Ilakal which is new taluk centre;

b) if so, whether the works would be commenced by sanctioning the grant during the current year? (complete details be furnished)

## CONSTRUCTION OF OUTER RING ROAD

**SRI YASHVANTHARAYGOUDA VITTALAGOUDA PATIL (INDI) -**

2.(40) Will the Deputy Chief Minister (Public Works) be pleased to state:-

a) whether it has come to the notice of the Government that the proposal for construction of outer ring road/ring road/ bypass road in the outskirts of Indi town remained pending in the Government for the last 3 years;

b) if so, the outlines thereof; (details be furnished)

c) the reasons for not sanctioning the grant to the said works so far;

d) whether the Government has contemplated to sanction the grant during the current year, if so, the time by when and the quantum of grant would be sanctioned ; (details be furnished)

e) the criteria followed by the Government to accord sanction for construction of outer ring road in the outskirts of Town/city?(details be furnished)

## AGRICULTURAL MACHINERIES

**SRI NANJEGOWDA K.Y (MALUR) -**

3.(187) Will the Minister for Agriculture be pleased to state:-

a) the quantum of grant fixed by the Government to distribute Tractor, Tiller, other equipments under Agricultural Mechanization scheme; (details be furnished)

b) the number of beneficiaries have been distributed these equipments under said scheme in the limits of Malur Assembly Constituency; (details of last three years be furnished)

c) the modern initiatives taken by the Government to promote agricultural activities ? (details be furnished )

## HOUSING FOR ALL SCHEME

**SRI SHIVALINGE GOWDA K.M (ARSIKERE) -**

4.(51) Will the Minister for Housing be pleased to state:-

a) whether it has come to the notice of the Government that the construction work of Ashraya House under housing for all scheme is being delayed in Arsikere ; if so, the reasons for the delay ; the time limit within which the works would be completed ;

b) the total amount earmarked for said scheme ; the quantum of grant released so far?

## ROAD DEVELOPMENT

**SRI NISARGANARAYANA SWAMY L.N (DEVANAHALLI) -**

5.(17) Will the Deputy Chief Minister (Public Works) be pleased to state:-

a) whether it has come to the notice of the Government that the roads are very dilapidated condition in the limits of Devanahalli and Vijayapur Towns ;

b) if so, the measures taken by the government for repair of dilapidated roads since these towns are adjacent to International Airport and National highway and increasing of vehicular movement; (details be furnished)

c) if so, the measures taken by the Government to construct 04 lane road in these two Towns; (details be furnished )

## HABITATIONS NOT ON REVENUE RECORDS

**SRI ASHOK NAIK K.B (SHIVAMOGGA RURAL) -**

6.(252) Will the Minister for Revenue be pleased to state:-

a) the number of habitations which are not on revenue records coming under the limits of Shivamogga Rural Assembly Constituency; (details be furnished)

b) whether it has come to the notice of the Government that the habitations not on revenue records are deprived from basic amenities in the limits of this constituency ;

c) if so, the steps taken by the government to declare these habitations as revenue villages ?

## IMPLEMENTATION OF PROJECTS

**SRI UMANATHA A. KOTIAN (MOODABIDRI) -**

7.(28) Will the Deputy Chief Minister (Public Works) be pleased to state:-

a) the particulars of works sanctioned and implemented by the Public Works Department in the limits of Dakshina Kannada district for the last 3 years ; out of which, the works which are incompleted;

b) the number of new roads constructed and developed by the Public Works Department in the limit of Moodabidri/ Mulki Constituency; (details be furnished )

c) the action plans chalked out by the Government for timely implementation of departmental works in the limits of Moodabidri Constituency ?

## VILLAGE ACCOUNTANTS

**SRI KRISHNAREDDY.M (CHINTAMANI) -**

8.(53) Will the Minister for Revenue be pleased to state:-

a) the number of village accountant posts are lying vacant in Chikkaballapur district;

b) the number of village accountants working in additional charge in the said district; (details be furnished)

c) whether it has come to the notice of the Government that the Government has not filled the vacant village accountant posts and putting pressure on village accountants by assigning several revenue circles to one village accountant ;

d) if so, the action taken by the Government ; (details be furnished)

e) the steps taken by the Government to send village accountants back to their parent office who are working on deputation in other office ? ( details be furnished )

**NEW WORKS**

**SRI MAHADEVA K. (PIRIYAPATNA) -**

9.(13) Will the Deputy Chief Minister (Public Works) be pleased to state:-

a) the total amount of works intent to implement newly under State high way development (SHDP) project during the year 2020-21 in the state;

b) the particulars of sources of grant to implement these works;

c) the total amount of works has been carried out under State high way development project in Piriyapatna Assembly Constituency for the year 2020-21 ? (details of works be furnished)

**SANCTIONED POSTS**

**SRI ACHAR HALAPPA BASAPPA (YELBURGA) -**

10.(183) Will the Minister for Agriculture be pleased to state:-

a) the number of posts sanctioned to Joint Director , Deputy Director and Assistant Director offices of Agricultural Department in Koppal district; (cadre-wise details be furnished)

b) out of which , the number of posts filled up and lying vacant; (post-wise details be furnished)

c) the steps taken by the Government to fill up these vacant posts;

d) the number of staff appointed on outsource basis ; the criteria followed in the said recruitment? (taluk-wise details be furnished)

## RESTORATION OF TEMPLES

**SRI BELLIPRAKASH (KADUR) -**

11.(161) Will the Minister for Muzari and Fisheries, Ports and Inland Water Transport be pleased to state:-

a) the number of Muzari temples coming under the limits of Kadur Assembly Constituency; the grant released for restoration of temples of this Constituency during the current year;

b) out of which, the grant spent and unspent; (details be furnished)

c) the particulars of temples which are selected for restoration? (details be furnished)

## ERROR IN RTC

**SRI RAJEGOWDA T.D. (SRINGERI) -**

12. (156) Will the Minister for Revenue be pleased to state:-

a) whether it has come to the notice of the Government that in the Crop Colum of RTC (Phani) entered as "dry" due to software fault since last 2 years;

b) if so, the time limit within which the software problem would be corrected;

c) the number of farmers are deprived from crop loan, subsidies so far due to error found in RTC in Sringeri Assembly constituency; the steps taken by the Government in this regard? (details be furnished)

## FISH PRODUCTION CENTER

**SRI H.D. REVANNA (HOLENARASIPUR) -**

13.(151) Will the Minister for Muzrai and Fisheries, Ports and Inland Water Transport be pleased to state:-

a) whether it has come to the notice of the Government that there is a fish production centre since 40 years in Sriramdevara Katte of Holenarasipur taluk in the limits of Holenarasipur Assembly Constituency;

b) if so, whether the Government is aware that the ponds of said fish production center are in dilapidated condition and fisher men are put to hardship due to delay caused in repair of ponds;

c) if so, the plan chalked out by the Government for development of said center? (complete details be furnished)

**RENOVATION OF INSPECTION BUNGALOW**

**SRI SANJEEVA MATANDOOR (PUTTUR) -**

14. (206) Will the Deputy Chief Minister (Public Works) be pleased to state:-

a) whether there is a proposal before the Government to renovate old inspection Bungalow belonging to PWD in Uppinangadi Town beside the National high way No.75 in Puttur taluk;

b) if not, whether a proposal for construction of new inspection Bungalow is before the Government?

**ARADHANA SCHEME**

**SRI MANJUNATH H.P (HUNSUR) -**

15. (219) Will the Minister for Muzrai and Fisheries, Ports and Inland Water Transport be pleased to state :-

a) the total grant released under Aradhana Scheme by Muzrai Department for Hunsur taluk;(past 3 years details be furnished)

b) the total amount released as per the demand of villagers? (village-wise, year-wise details be furnished)

**M.K. Vishalakshi**
Secretary (I/c)
Karnataka Legislative Assembly

Government Press, Vikasa Soudha Unit, Bengaluru, Copies - 750 - P2